ಇಂದು ದಿನಾಂಕ 27-01-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲು: ಶ್ರೀ.ಎ.ಜಿ.ಪಿ. ವಕೀಲರು ರವರಿಂದಃ**

ರೆಪರನ್ಸ ಅರ್ಜಿಯನ್ನು ನಾನೇ ಹಾಕಿದ್ದೇನೆ. ಅದರಲ್ಲಿ ನನ್ನ ಜಮೀನಿನ ಸರ್ವೆ ನಂ. ನಮೂದು ಮಾಡಿದ್ದೇನೆ. ನನ್ನ ಎಷ್ಟು ಕ್ಷೇತ್ರದ ಜಮೀನು ಮುಳುಗಡೆ ಆಗಿದೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಬಾವಿ ಬರುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ನನ್ನ ಹೆಸರಿನಲ್ಲಿ ಮೋಟಾರ್ ಆಳವಡಿಸಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಿಶಾನೆ ಪಿ-7 ರಲ್ಲಿ ಸರ್ವೆ ನಂ. ನಮೂದು ಇಲ್ಲಾ ಎಂದರೆ ಸರಿಯಲ್ಲ. ಜಮೀನಿನಲ್ಲಿ ಬಾವಿ ಇದೆ ಮತ್ತು 5 ಹೆಚ್.ಪಿ.ವಿದ್ಯುತ್ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸುಳ್ಳು ಭಾವಚಿತ್ರಗಳನ್ನು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ.

ಎದುರುದಾರ ನಮ್ಮ ಜಮೀನಿಗೆ ಬಂದು ವಾಸ್ತವ ಅಂಶಗಳನ್ನು ಪರಿಶೀಲನೆ ಮಾಡಿ ಸರಿಯಾದ ಪರಿಹಾರವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಜಮೀನು ನೋಡಲು ಬಂದಾಗ ಜಮೀನಿನಲ್ಲಿ 5 ಹೆಚ್‌ಪಿ ಮೋಟಾರ್ ಆಳವಸಿದ್ದೇನೆ ಎಂದು ಎದುರುದಾರಿಗೆ ತಕರಾರು, ವಗೈರೆ ಕೊಟ್ಟಿಲ್ಲ. ಸರ್ವೆ ನಂ.511:2 ರಲ್ಲಿ 68 ನಿಂಬೆಗಿಡಗಳು, 6 ಬಿದರಿನ ಮರಗಳು, 12 ಬೇವಿನ ಮರ, ಒಂದು ಗುಡಿಸಲು, ಒಂದು ಬಾವಿ ಮತ್ತು 5ಹೆಚ್‌ಪಿ ಪಂಪಸೇಟ್ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವುಗಳು ನನಗೆ ಸಂಬಂಧಪಟ್ಟ ಜಮೀನಿನಲ್ಲಿ ಬರುತ್ತವೆ ಎಂದು ತೋರಿಸಲು ಸಂಬಂಧಪಟ್ಟ ಅಧಿಕಾರಿಗಳಿಂದ ಯಾವುದೇ ದಾಖಲೆ ಹಾಜರುಡಿಪಡಿಸಿಲ್ಲ. ಜಮೀನಿನಲ್ಲಿ ಕಬ್ಬು ಮತ್ತು ಇತರೆ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಬೆಳೆಗಳನ್ನು ಮಾರಾಟ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ಬೆಳೆಗಳನ್ನು ಬೆಳೆಯುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಜಮೀನು ಒಣಬೇಸಾಯ ಜಮೀನು ಮತ್ತು ನೀರಾವರಿ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ವಾರ್ಷಿಕ 1,50,000.00 ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

ಜಮೀನಿನ ಬೆಲೆ ಎಕರೆಗೆ 25 ಲಕ್ಷ ಆಗುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕಬ್ಬು ಬೆಳೆದರೆ 3 ರಿಂದ 5 ವರ್ಷ ಬೆಳೆ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೊದಲನೇ ಸಾರಿ ನಾಟಿ ಮಾಡಲು 20% ಖರ್ಚು ಬರುತ್ತದೆ ಮತ್ತು ನಂತರದ ವರ್ಷಗಳಲ್ಲಿ ಉತ್ಪನ್ನದ 8% ರಿಂದ 10% ಮಾತ್ರ ಖರ್ಚು ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಉತ್ಪನ್ನದ 75% ಖರ್ಚು ಬರುತ್ತದೆ ಎಂದರೆ ಸರಿಯಲ್ಲ. ಮೊದಲ ಕಬ್ಬಿನ ಬೆಳೆ ಬಂದ ರೀತಿ ಎರಡನೇ ಬೆಳೆ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ 60 ರಿಂದ 70 ಟನ್ ಕಬ್ಬು ಬೆಳೆದ ಬಗ್ಗೆ ದಾಖಲೆ ಹಾಜುರಪಡಿಸಿಲ್ಲ. ಕಡಿಮೆ ಬೆಲೆ ನಿಗಧಿಪಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಭೂಸ್ವಾಧೀನ ಅಧಿಕಾರಿಗಳು ನಮ್ಮ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಾಗ ಜಮೀನನ್ನು ಪರಿಶೀಲನೆ ಮಾಡಿ ಆಗಿನ ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ಯೋಗ್ಯಬೆಲೆಯನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಕಡಿಮೆ ಬೆಲೆ ಆಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನ್ನ ಅರ್ಜಿ ಕಾಲಪರಿಮಿತಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಎಲ್ಎಸಿ ನಂ.496:15 ನ ತೀರ್ಪು ನಮ್ಮ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೆ. ಸರಿ ಅದೆ.**

**ಸಹಿ**

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಜಮಖಂಡಿ.**

**ಸಹಿ**
**ಸಾಕ್ಷಿಯ ಸಹಿ**